O.S. ನಂಬರಃ 04/2019

ಪಿ. ಡಬ್ಲ್ಯೂಃ 1

ದಿಃ 27-04-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 1,3 ಮತ್ತು 4,5 ಮತ್ತು 7 ನೇ ಪ್ರತಿವಾದಿಯರ ಪರ ಶ್ರೀಮತಿ ಎಸ್.ಎನ್.ಹೆಚ್. ವಕೀಲರಿಂದಃ

ನಾರಾಯಣ ಹೊನ್ನಪ್ಪಾ ನಾಯಕನಿಗೆ ಗಿರೀಶ ಮತ್ತು ಅರ್ಚನಾ ಎಂಬುವ ಇನ್ನಿಬ್ಬರು ಮಕ್ಕಳಿರುತ್ತಾರೆಂದರೆ ಸಾಕ್ಷಿ ಅವರನ್ನು ಹೊರತುಪಡಿಸಿ ಇನ್ನೂ ಇಬ್ಬರು ಮಕ್ಕಳಿದ್ದಾರೆ ಎಂದು ಹೇಳುತ್ತಾರೆ. ನಾರಾಯಣ ಹೊನ್ನಪ್ಪ ನಾಯಕನಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳಿರುತ್ತಾರೆ. ಗಿರೀಶ, ಹರೀಶ, ಅರ್ಚನಾ ಹಾಗೂ ಮಂಗಲಾ ಇವರು ನಾರಾಯಣನ ಮಕ್ಕಳು ಎಂದರೆ ಸರಿ. ನಾರಾಯಣ ಕುಟುಂಬಕ್ಕೂ ಸಹ ಕುಟುಂಬದ ಆಸ್ತಿಯಲ್ಲಿ ಹಕ್ಕಿದೆ ಎಂದರೆ ಅವರ ತಂದೆಗಿದೆ ಎಂದು ಹೇಳುತ್ತಾರೆ. ನಾರಾಯಣ ಮೃತಪಟ್ಟಿರುತ್ತಾನೆ ಎಂದರೆ ಸರಿ.

ದಾವೆ ಮಾಡುವ 2 ವರ್ಷದ ಪೂರ್ವದಲ್ಲಿಯೇ ನಾರಾಯಣ ಮೃತಪಟ್ಟಿರುತ್ತಾನೆ. ನಾರಾಯಣ ತನ್ನ ಮಕ್ಕಳನ್ನು ವಾರಸುದಾರರನ್ನಾಗಿ ಬಿಟ್ಟು ಮೃತಪಟ್ಟಿದ್ದಾನೆ ಎಂದು ದಾವೆ ಸಲ್ಲಿಸುವ ಸಮಯದಲ್ಲಿ ಗೊತ್ತಿತ್ತು ಎಂದರೆ ಸರಿ. ನಾರಾಯಣನ ಮಕ್ಕಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

ದಾವೆಯಲ್ಲಿ ನಾರಾಯಣನ ಮಕ್ಕಳನ್ನು ಸೇರಿಸಿಲ್ಲ ಎಂದರೆ ವಕೀಲರಿಗೆ ಮಾಹಿತಿ ಇದೆ ಎಂದು ಹೇಳುತ್ತಾರೆ.

ನಾನು ಉದ್ಯೋಗದ ಮೇಲೆ 14-ವರ್ಷ ಭಾವಿಕೇರಿಯಿಂದ ದೂರ ಉಳಿದರೂ ಸಹ ಆಗಾಗ ಬಂದು ಹೋಗಿ ಮಾಡುತ್ತಿದ್ದೆ. ಭಾವಿಕೇರಿ ಗ್ರಾಮದ ಸರ್ವೇ ನಂ. 557/3 ರಲ್ಲಿ ಭತ್ತ ಮತ್ತು ಕಲ್ಲಂಗಡಿ ಬೆಳೆಯುತ್ತೇವೆ. ಸದರಿ ಬೆಳೆಯಿಂದ ಅಂದಾಜು 5-6 ಸಾವಿರ ಪ್ರತಿ ವರ್ಷಕ್ಕೆ ಸಿಗುತ್ತದೆ. ಸದರಿ ಸರ್ವೇ ನಂಬರಿನಲ್ಲಿನ ಉತ್ಪನ್ನ ನಾನು ಯಾರಿಗೂ ನೀಡಿಲ್ಲ ಎಂದರೆ ಸಾಕ್ಷಿ ನಾನು ಮತ್ತು ನನ್ನ ಸಹೋದರರ ಕುಟುಂಬ ಹಂಚಿಕೊಂಡು ಉಪಭೊಗಿಸುತ್ತಿದ್ದೇವೆ ಎಂದು ಹೇಳುತ್ತಾರೆ. ಹಂಚಿಕೊಟ್ಟ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ಸರ್ವೇ ನಂ. 557/3 ನ್ನು 25-ವರ್ಷಗಳಿಂದಲೂ ನಾನು ಮತ್ತು ನನ್ನ ಸಹೋದರರು ಪ್ರತಿ ವರ್ಷವೂ ಒಬೊಬ್ಬರಂತೆ ಮಾಡುತ್ತಾ ಬಂದಿದ್ದೇವೆ. ವರ್ಷಕೊಬ್ಬರು ಜಮೀನು ಉಳುವೆ ಮಾಡುವ ಕುರಿತಾಗಿ ಯಾವುದೇ ದಾಖಲೆ ಇರುವುದಿಲ್ಲ. ಸರ್ವೇ ನಂ. 557/3 ನ್ನು ಈ ದಾವೆಯಲ್ಲಿ ಯಾಕೆ ಸೇರಿಸಿಲ್ಲ ಎಂದರೆ ಸಾಕ್ಷಿ ಅದರಲ್ಲಿ ನನ್ನ ಹಾಗೂ ನನ್ನ ಸಹೋದರರ ಹೆಸರು ಇರುವುದರಿಂದ ಅದನ್ನು ಸೇರಿಸಿಲ್ಲ, ದಾವಾ ಸರ್ವೇ ನಂಬರಗಳಲ್ಲಿ ನನ್ನ ಹೆಸರು ತೆಗೆದುಹಾಕಿದ್ದರಿಂದ ಅವುಗಳಿಗೆ ಮಾತ್ರ ದಾವೆ ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ.

ನ್ಯಾಯಾಲಯದ ಪ್ರಶ್ನೆಃ ಸರ್ವೇ ನಂ. 557/3 ಇದು ಯಾವ ಮೂಲದಿಂದ ಪಡೆದಿರುತ್ತೀರಿ ಎಂದರೆ ತಂದೆಯವರಿಂದ ಬಂದಿದ್ದು, ಎಲ್ಲರಿಗೂ ಪಾಲಿದೆ ಎಂದು ಹೇಳುತ್ತಾರೆ.

ದಾವಾ ಅ. ನಂ. 3 ರಿಂದ 8 ಗಳಲ್ಲಿ ನನ್ನ ಹಾಗೂ ನನ್ನ ಸಹೋದರರ ಹೆಸರಿದೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಸೇರಿಸಲು ವಕೀಲರಿಗೆ ಹೇಳಿಲ್ಲ, ಕೇವಲ ಎರಡು ಸರ್ವೇ ನಂಬರ ಮಾತ್ರ ಸೇರಿಸಲು ಹೇಳಿರುತ್ತೇನೆ ಎಂದು ಹೇಳುತ್ತಾರೆ. ದಾವಾ ಅ.ನಂ. 3 ರಿಂದ 8 ಗಳಿಗೆ ಸಂಬಂಧಿಸಿದ ಪಹಣಿ ಪತ್ರಿಕೆ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ದಾವಾ ಅ.ನಂ. 3 ರಿಂದ 8 ಆಸ್ತಿಗಳಲ್ಲಿ ಪಾಲು ಕೇಳಿ ಅವುಗಳ ಕುರಿತು ದಾಖಲೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ. 557/3 ನ್ನು ನಾನೊಬ್ಬನೇ ಉಪಭೋಗ ಮಾಡುತ್ತಿರುವುದರಿಂದ ಉದ್ದೇಶಪೂರ್ವಕವಾಗಿ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ನಿಪಿ-12 ನ್ನು ನಾನೇ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನಾರಾಯಣ ಬೆಲೆಕೇರಿ ಕಂದಾಯ ನಿರೀಕ್ಷಕರ ಮುಂದೆ ನಿಪಿ-13 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ನಿಪಿ-13 ರ ಮೇಲಿನ ಸಹಿ ನೋಡಿ ತಾನು ಮಾಡಿಲ್ಲ ಎಂದು ಹೇಳುತ್ತಾರೆ. ಕುಟುಂಬದ ದೇವತಾ ಕಾರ್ಯ, ಪಿತೃಕಾರ್ಯ ಹಾಗೂ ಕುಟುಂಬ ನಡೆಸಿಕೊಂಡು ಹೋಗುವ ಕರಾರಿನ ಮೇರೆಗೆ 1 ನೇ ಪ್ರತಿವಾದಿಗೆ ಆಸ್ತಿ ಬಿಟ್ಟುಕೊಟ್ಟ ಬಗ್ಗೆ

ದಾಖಲೆ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆಸ್ತಿ ಬಿಟ್ಟುಕೊಟ್ಟ ನಂತರ 1 ನೇ ಪ್ರತಿವಾದಿ ಹಾಗೂ ಆತನ ಕುಟುಂಬದ ಸದಸ್ಯರು ಉಪಭೋಗ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸರ್ವೇ ನಂ.583/4 ರಲ್ಲಿ ತನ್ನ ಮಗಳಾದ 3 ನೇ ಪ್ರತಿವಾದಿಗೆ ಭಕ್ಷಿಸ್ ಪತ್ರ ಮಾಡಿದ್ದಾರೆಂದರೆ ನಮಗೆ ತಿಳಿಯದಂತೆ ಮಾಡಿದ್ದಾನೆ, ಕಾರಣ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದು ಹೇಳುತ್ತಾರೆ. ಅದೇ ರೀತಿ ಇನ್ನೊಂದು ದಾವಾ ಸರ್ವೇ ನಂ. 367/1 ನ್ನು ತನ್ನ ಇನ್ನೊಬ್ಬ ಮಗಳಾದ 4 ನೇ ಪ್ರತಿವಾದಿಗೆ ಭಕ್ಷಿಸ್ ಪತ್ರ ಮಾಡಿದ್ದಾನೆ ಎಂದರೆ ನಮಗೆ ತಿಳಿಯದಂತೆ ಮಾಡಿದ್ದಾರೆಂದು ಹೇಳುತ್ತಾರೆ. ಭಕ್ಷಿಸ್ ಪತ್ರ ಮಾಡಿದ ಒಂದು ವರ್ಷದ ನಂತರ ನನಗೆ ಭಕ್ಷಿಸ್ ಪತ್ರದ ವಿಚಾರ ತಿಳಿದಿರುತ್ತದೆ. ಭಕ್ಷಿಸ್ ಪತ್ರದ ವಿಚಾರ ತಿಳಿದ ಒಂದು ವರ್ಷದಲ್ಲಿ ದಾವೆ ಸಲ್ಲಿಸಿದ್ದೇನೆ. ಭಕ್ಷಿಸ್ ಪತ್ರದ ವಿಚಾರ ತಿಳಿದ ಒಂದು ವರ್ಷದಲ್ಲಿ ದಾವೆ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೆಸವಳ್ಳಿಯಲ್ಲಿ 8-ಎಕರೆ ಜಮೀನನ್ನು ನಾರಾಯಣ ಉಳುಮೆ ಮಾಡುತ್ತಿದ್ದಾನೆ ಎಂದರೆ ಎಷ್ಟು ಎಕರೆ ಎಂದು ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಾರಾಯಣ ಕೆಸವಳ್ಳಿಗೆ ಹೋಗುವ ಪೂರ್ವದಲ್ಲಿ ಭಾವಿಕೇರಿಗೆ ವಾಸವಿದ್ದ ಎಂದರೆ ಸರಿ. ಸಾಕ್ಷಿ ಅಲ್ಲಲ್ಲಿ ಕೆಲಸಕ್ಕೆ ಹೋಗುತ್ತಿದ್ದ ಎಂದು ಹೇಳುತ್ತಾರೆ. ನಾರಾಯಣ ಉಳುಮೆ ಬಿಟ್ಟರೆ ಬೇರೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿ ಕಾಯಿ ಹಾಗೂ ಬಾಳೇಕಾಯಿ ಹಾಗೂ ಇತರ ವ್ಯಾಪಾರ ಮಾಡುತ್ತಿದ್ದ ಎಂದು ಹೇಳುತ್ತಾರೆ. ಕೆಸವಳ್ಳಿಯ ಜಮೀನು ಪಡಾ ಜಮೀನು ಆಗಿತ್ತು ಎಂದರೆ ಮಾಹಿತಿ ಇಲ್ಲ. ಭಾವಿಕೇರಿಯ ಜಮೀನಿನ ಉತ್ಪನ್ನದಿಂದಲೇ ಕೆಸವಳ್ಳಿಯ ಜಮೀನು ಅಭಿವೃದ್ಧಿಪಡಿಸಿದ್ದು ಇರುತ್ತದೆ ಎಂದರೆ ಸಾಕ್ಷಿ, ಒಂದು ನಯಾ ಪೈಸಾ

ಉಪಯೋಗಿಸಿಲ್ಲ ಏಕೆಂದರೆ ಭಾವಿಕೇರಿಯ ಜಮೀನುಗಳ ಉತ್ವನ್ನ ಅಷ್ಟೊಂದು ಇರಲಿಲ್ಲ ಎಂದು ಹೇಳುತ್ತಾರೆ. ಕೆಸವಳ್ಳಿ ಜಮೀನು ಸಹ ಒಟ್ಟು ಕುಟುಂಬದಲ್ಲಿದ್ದಾಗಲೇ ಅರ್ಜಿಸಿದ್ದು ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಕೆಸವಳ್ಳಿ ಜಮೀನು ಸೇರಿಸಿಲ್ಲ ಎಂದರೆ ಸರಿಯಲ್ಲ.

ನಾರಾಯಣ ಕೆಸವಳ್ಳಿ ಜಮೀನನ್ನು ಯಾವ ಉತ್ವನ್ನದಿಂದ ಸಾಗುವಳಿ ಮಾಡಿದ್ದಾರೆಂದು ಮಾಹಿತಿ ಇಲ್ಲ ಎಂದರೆ ಸರಿ. ದಾವಾ ಅ.ನಂ. 1 ಮತ್ತು 2 ರ ಕುರಿತು ಈಗಾಗಲೇ ನಾನು ಮತ್ತು ನಾರಾಯಣ ಹಕ್ಕು ಬಿಟ್ಟುಕೊಟ್ಟಿದ್ದರಿಂದ ಅವುಗಳಲ್ಲಿ ಹಕ್ಕಿಲ್ಲ ಎಂದರೆ ಸರಿಯಲ್ಲ. ಮ್ಯುಟೇಷನ್ ವರದಿಗಳು ನಮ್ಮ ಗಮನಕ್ಕೆ ಇದ್ದಂತೆ ಆಗಿರುತ್ತವೆ ಎಂದರೆ ಸರಿಯಲ್ಲ. ಮ್ಯುಟೇಷನ್ ವರದಿ ಪೂರ್ವದಲ್ಲಿ ಆ ಕುರಿತು ನೋಟಿಸು ಅಂಟಿಸುತ್ತಾರೆಂದರೆ ಸರಿ. ಸದರಿ ನೋಟಿಸಿಗೆ ತಕರಾರು ಮಾಡಿಲ್ಲವೆಂದರೆ ಆ ಕುರಿತು ನಮ್ಮ ಗಮನಕ್ಕೆ ಇಲ್ಲ ಎಂದು ಹೇಳುತ್ತಾರೆ. ಮ್ಯುಟೇಷನ ಕುರಿತಾಗಿ ನೋಟಿಸು ಮಾಡಿದ ವಿಷಯ ಹಾಗೂ ಆಸ್ತಿ ಬೀರಣ್ಣನ ಹೆಸರಿನಲ್ಲಿ ಬಿಟ್ಟುಕೊಟ್ಟರೂ ನಾನು ಮತ್ತು ನಾರಾಯಣನ ಕುಟುಂಬ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಸರ್ವೇ ನಂ. 557/3, ಕೆಸವಳ್ಳಿಯ 8-ಎಕರೆ ಜಮೀನು ಹಾಗೂ ನನ್ನ ವಾಸ್ತವ್ಯದ ಮನೆ ನಂ.952 ನ್ನು ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮನೆ ನಂ. 952 ರಲ್ಲಿ ಭಾಗ ಮಾಡಿಕೊಂಡು ಅರ್ಧ ಮನೆಯಲ್ಲಿ ನಾನು ಉಳಿದರ್ಧ ಮನೆಯಲ್ಲಿ 1 ನೇ ಪ್ರತಿವಾದಿ ಕುಟುಂಬ ವಾಸವಿದೆ ಎಂದು

ಹೇಳುತ್ತಾರೆ. ಸದರಿ ಮನೆಯನ್ನೂ ಸಹ ಈ ದಾವೆಯಲ್ಲಿ ಸೇರಿಸಬೇಕಿತ್ತು ಎಂದರೆ ಅದರ ಅವಶ್ಯಕತೆ ಉದ್ಭವಿಸಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಗಳನ್ನು ಸೇರಿಸದೇ ದಾವೆ ಊರ್ಜಿತಗೊಳ್ಳುವುದಿಲ್ಲ ಎಂದರೆ ಸರಿಯಲ್ಲ. ಅ. ನಂ. 1 ಮತ್ತು 2 ನೇ ಆಸ್ತಿಗಳಲ್ಲಿಯೂ ಸಹ ನನ್ನ ಸಹೋದರಿಯರಿಗೆ ಹಕ್ಕಿದೆ ಎಂದರೆ ಅವರಿಗೂ ಪಾಲು ನೀಡಲು ತಕರಾರು ಇಲ್ಲ ಎಂದು ಹೇಳುತ್ತಾರೆ. ನಮ್ಮನಮ್ಮಲ್ಲಿ ಪಾಲು ಹೆಣ್ಣುಮಕ್ಕಳ ಒಪ್ಪಿಗೆ ಮೇರೆಗೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಮೊದಲು ಆದ ಹಕ್ಕು ಬಿಟ್ಟುಕೊಟ್ಟ ಪ್ರಕಾರ ದಾವಾ ಅ.ನಂ. 1 ಮತ್ತು 2 ಆಸ್ತಿಗಳು ಹಂಚಿಕೆಯಾಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅ. ನಂ. 1 ಮತ್ತು 2 ಆಸ್ತಿಗಳು 3 ಮತ್ತು 4 ನೇ ಪ್ರತಿವಾದಿಯರ ಕಬ್ಜೆಯಲ್ಲಿವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.